**ದಿನಾಂಕ : *20-01-2026* ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಅರ್ಜಿದಾರರ ಪರವಾಗಿ ಶ್ರೀ. ಎಮ್ ಬಿ ಬಿ ವಕೀಲರಿಂದ:**

ನನ್ನ ತಕರಾರನ್ನು ಸಲ್ಲಿಸಲು ನಾನು ಮಾಹಿತಿ ನೀಡಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ನಾನು ಮಾಹಿತಿ ನೀಡಿರುತ್ತೇನೆ. ದೇವಪ್ಪ ಗೋಪಣ್ಣ ಮಾಳಿ ಇವರು ಜಾನ ಡಿಯರ ಕಂಪನಿಯ ಟ್ರ್ಯಾಕ್ಟರ ನಂ. ಕೆಎ-29 ಟಿಬಿ5149 ಇದರ ಚಾಲಕನಾಗಿ ಕಾರ್ಯ ನಿರ್ವಹಿಸುತ್ತಿರುವಾಗ ಅದು ನನ್ನ ಮಾಲೀಕತ್ವದಲ್ಲಿ ಇತ್ತು ಎಂದರೆ ಸಾಕ್ಷಿದಾರರು ಟ್ರ್ಯಾಕ್ಟರ ನನ್ನ ಮಾಲೀಕತ್ವದಲ್ಲಿ ಇತ್ತು ಆದರೆ ಅವರು ಸದರಿ ಟ್ರ್ಯಾಕ್ಟರನ ಚಾಲಕನಾಗಿರಲಿಲ್ಲ ಮತ್ತು ಅವರು ಕಬ್ಬು ಕಡಿಯಲು ಬಂದಿದ್ದರು ಎಂದು ಹೇಳುತ್ತಾರೆ. ನಾನು ದೇವಪ್ಪ ಗೋಪಣ್ಣ ಮಾಳಿಯವರಿಗೆ ಟ್ರ್ಯಾಕ್ಟರನ್ನು ಕೊಟ್ಟು ಕಳುಹಿಸುವಾಗ ಸಮಯ ಎಷ್ಟು ಆಗಿತ್ತು ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ನಾನು ಅವರಿಗೆ ಟ್ರ್ಯಾಕ್ಟರನ್ನು ಕೊಟ್ಟು ಕಳುಹಿಸಿರುವುದಿಲ್ಲ ಎಂದು ಹೇಳುತ್ತಾರೆ. ಆ ದಿನ ಟ್ರ್ಯಾಕ್ಟರನ್ನು ತೆಗೆದುಕೊಂಡು ಯಾರು ಜಮೀನಿಗೆ ಹೋಗಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ಆ ದಿನ ಟ್ರ್ಯಾಕ್ಟರ ನಮ್ಮ ಜಮೀನಿನಲ್ಲಿ ಇತ್ತು ಎಂದು ಹೇಳುತ್ತಾರೆ. ದೇವಪ್ಪ ಗೋಪಣ್ಣ ಮಾಳಿಯವರು ಹೇಗೆ ತೀರಿಕೊಂಡಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ಅಲ್ಲೆ ಇದ್ದ ಟ್ರ್ಯಾಕ್ಟರನ್ನು ಚಾಲು ಮಾಡಿ ತೆಗೆದುಕೊಂಡು ಹೋಗಿ ತೀರಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ದೇವಪ್ಪ ಗೋಪಣ್ಣ ಮಾಳಿಯವರು ಟ್ರ್ಯಾಕ್ಟರನ್ನು ತೆಗೆದುಕೊಂಡು ಚಾಲು ಮಾಡಿ ನಮ್ಮ ಬಾವಿಯಲ್ಲಿ ಬಿದ್ದು ತೀರಿಕೊಂಡಿರುತ್ತಾರೆ. ನನ್ನ ಮಾಲ್ಕೀಯಲ್ಲಿರುವ ಜಮೀನಿನಲ್ಲಿರುವ ಬಾವಿಯಲ್ಲಿ ಬಿದ್ದು ತೀರಿಕೊಂಡಿರುತ್ತಾರೆ. ನನ್ನ ಮಾಲೀಕತ್ವದಲ್ಲಿ ಇದ್ದ ಟ್ರ್ಯಾಕ್ಟರನ್ನು ಚಾಲು ಮಾಡಿ ಎಂದು ದೇವಪ್ಪ ಗೋಪಣ್ಣ ಮಾಳಿಯವರಿಗೆ ಹೇಳಿದ್ದರಿಂದ ಮತ್ತು ಅವರು ನಮ್ಮ ಚಾಲಕನಾಗಿದ್ದುದರಿಂದ ಅವರು ಟ್ರ್ಯಾಕ್ಟರನ್ನು ತೆಗೆದುಕೊಂಡು ಹೋದಾಗ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರವನ್ನು ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಟ್ರ್ಯಾಕ್ಟರನ್ನು ಯಾರು ಚಲಾಯಿಸುತ್ತಿದ್ದರು ಎಂದರೆ ಸಾಕ್ಷಿದಾರರು ಬೇರೆ ಚಾಲಕ ಇದ್ದರು ಎಂದು ಹೇಳುತ್ತಾರೆ. ಬೇರೆ ಚಾಲಕನ ಹೆಸರು ಹುಸೇನಸಾಬ ಕುದರಿ ಎಂದು ಇರುತ್ತದೆ. ನನ್ನ ತಕರಾರಿನಲ್ಲಿ ಸದರಿ ಟ್ರ್ಯಾಕ್ಟರಗೆ ಬೇರೆ ಚಾಲಕ ಇದ್ದ ಎಂದು ಹೇಳಿ ಬರೆಸಿರುವುದಿಲ್ಲ. ದೇವಪ್ಪ ಗೋಪಣ್ಣ ಮಾಳಿಯವರಿಗೆ ಎಷ್ಟು ವಯಸ್ಸು ಆಗಿತ್ತು ಎಂದರೆ ಸಾಕ್ಷಿದಾರರು ಗೊತ್ತಿರುವುದಿಲ್ಲ ಎಂದು ಹೇಳತ್ತಾರೆ. 1 ನೇ ಅರ್ಜಿದಾರರು ದೇವಪ್ಪ ಗೋಪಣ್ಣ ಮಾಳಿಯವರ ಹೆಂಡತಿ ಎಂದರೆ ಸರಿ. 2 ಮತ್ತು 3 ನೇ ಅರ್ಜಿದಾರರು ದೇವಪ್ಪ ಗೋಪಣ್ಣ ಮಾಳಿಯವರ ಮಕ್ಕಳು ಎಂದರೆ ಸರಿ. 4 ಮತ್ತು 5 ನೇ ಅರ್ಜಿದಾರರು ದೇವಪ್ಪ ಗೋಪಣ್ಣ ಮಾಳಿಯವರ ತಂದೆ ತಾಯಿ ಎಂದರೆ ಸರಿ. ಅರ್ಜಿದಾರರೆಲ್ಲರೂ ದೇವಪ್ಪ ಗೋಪಣ್ಣ ಮಾಳಿಯವರ ಮೇಲೆ ಅವಲಂಬಿತರಾಗಿದ್ದರು

ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಟ್ರ್ಯಾಕ್ಟರ ಡ್ರೈವರಿಗೆ ಎಷ್ಟು ಹಣವನ್ನು ಕೊಡುತ್ತಿದ್ದೀರಿ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ಅದು ನನ್ನ ಅಣ್ಣನಿಗೆ ಗೊತ್ತು ಎಂದು ಹೇಳುತ್ತಾರೆ. ದೇವಪ್ಪ ಗೋಪಣ್ಣ ಮಾಳಿಯವರಿಗೆ ಪ್ರತಿ ತಿಂಗಳು 20 ಸಾವಿರ ರೂ. ಸಂಬಳ ಮತ್ತು 200/- ದಿನ ಭತ್ಯೆಯನ್ನು ಕೊಡುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಹತ್ತಿರ ಕೆಲಸ ಮಾಡುವಾಗ ದೇವಪ್ಪ ಗೋಪಣ್ಣ ಮಾಳಿಯವರು ತೀರಿಕೊಂಡಿದ್ದರಿಂದ ಅವರ ವಾರಸುದಾರರಿಗೆ ಪರಿಹಾರದ ಹಣವನ್ನು ಕೊಡಲು ಭಾದ್ಯಸ್ತನಿರುತ್ತೇನೆ ಎಂದರೆ ಸರಿಯಲ್ಲ. ಅವರಿಗೆ ಪರಿಹಾರ ಕೊಡಬೇಕಾಗುತ್ತದೆ ಎಂದು ದೇವಪ್ಪ ಗೋಪಣ್ಣ ಮಾಳಿಯವರು ನನ್ನ ಹತ್ತಿರ ಕೆಲಸ ಮಾಡುತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.